ಯವರು ಕೂಡ ಕೆಲವರ ಮಟ್ಟಿಗೆ ಕೆಲವು ಕಡೆಗಳಲ್ಲಿ ಕ್ರಮ ತೆಗೆದುಕೊಂಡಿದ್ದಾರೆ ಆದರೂ ಸಹ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯವರು ಅವರನ್ನು ಬಿಡುವ ಹಾಗೆ ಮಾಡಿ ಕ್ರಮ ತೆಗೆದುಕೊಂಡು ಲೈಸೆನ್ಸ್ ಕೊಡುತ್ತೇವೆ ಎನ್ನುವ ಆಕ್ಷೇಪಣೆ ಮೇರೆಗೆ ಬಿಟ್ಟುಬಿಟ್ಟಿದ್ದಾರೆ. ಇದರಿಂದ ಸರ್ಕಾರದ ಬೊಕ್ಕಸಕ್ಕೆ ಲಕ್ಷಾಂತರ ರೂಪಾಯಿಗಳ ಹಣ ನಷ್ಟವಾಗಿದೆ. ಇದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಇದಕ್ಕೆ ರಾಯಲ್ಟಿ ಕೂಡ ಸಂದಾಯವಾಗಿಲ್ಲವೆಂತು ಪರ್‌ಪಸ್ ಆಗಿ ಆಡಿಟ್ ರಿಪೋರ್ಟ್ ಡಿಲೆಯಾಗುತ್ತಿದೆ. ಇಲ್ಲಿ ಕೆಲವು ವ್ಯಕ್ತಿಗಳ ಶಕ್ತಿ ಪ್ರಭಾವ ಸಹ ಇರಬಹುದು. ಇಲ್ಲಿ ಯಾರು ಪರ್ಮಿಶನ್ ತೆಗೆದುಕೊಂಡಿದ್ದಾರೋ ಅವರು ನಿಜವಾಗಿಯೂ ಸ್ವತಃ ಕಲ್ಲು ತೆಗೆಯುತ್ತಿಲ್ಲ. ಮಧ್ಯಸ್ಥಿತಿಕೆದಾರರು ಕಲ್ಲು ತೆಗೆಯುತ್ತಿದ್ದಾರೆ ಆದ್ದರಿಂದ ಇಲ್ಲಿ ಲೇಬರ್‌ಕಾಂಟ್ರ್ಯಾಕ್ಟ್ ಸೊಸೈಟಿ ಸ್ಥಾಪನೆ ಮಾಡಿ ಬೇರೆಯವರಿಗೆ ಪರವಾನಿಗೆ ಕೊಡುವ ಬಗ್ಗೆಲಾಗಿ ಅವರಿಗೆ ನೇರವಾಗಿ ಪರವಾನಿಗೆಯನ್ನು ಕೊಡುತ್ತೀರಾ? ನಂತರ ಒಂದು ಮಾತನ್ನು ನಾನು ಹೇಳುವುದಾದರೆ ತಾವೀಗ ಎಲ್ಲಾ ಆಡಳಿತವನ್ನು ವಿಕೇಂದ್ರೀಕರಣ ಮಾಡಿದ್ದೀರಿ. ಇದರಿಂದ ಅವ್ಯವಹಾರ ಸಹ ನಡೆಯುವುದಿಲ್ಲ. ಆದ್ದರಿಂದ ಮಂಡಲ ಪಂಚಾಯಿತಿ ಅಥವಾ ಜಿಲ್ಲಾ ಪರಿಷತ್ತಿನವರೇ ಪರವಾನಿಗೆ ಕೊಡುವ ಹಕ್ಕು ಕೊಟ್ಟು ಆಡಳಿತ ವಿಕೇಂದ್ರೀಕರಣ ಮಾಡುತ್ತೀರಾ ?

ಶ್ರೀ ರಮೇಶ್ ಸಿ. ಜಿಗಜಿಣಗಿ.–ಮಾನ್ಯ ಅಧ್ಯಕ್ಷರೇ ಕುಂದಾಪುರ ತಾಲ್ಲೂಕಿನಲ್ಲಿ ಕಲ್ಲುತೆಗೆಯುವುದು ಅಕ್ರಮವಾಗಿ ನಡೆಯುತ್ತಿದೆ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿಲ್ಲ. ಮಾನ್ಯ ಸದಸ್ಯರ ಹತ್ತಿರ ಪಟ್ಟಿ ಏನಾದರೂ ಇದ್ದು ಅದನ್ನು ನಮಗೆ ಕೊಟ್ಟರೆ ತಕ್ಷಣ ನಮ್ಮ ಇಲಾಖೆಯ ಒಬ್ಬ ಹಿರಿಯ ಅಧಿಕಾರಿಯನ್ನು ಕಳುಹಿಸಿಕೊಟ್ಟು ಅಲ್ಲಿ ನಡೆದಿರತಕ್ಕಂಥ ಅವ್ಯವಹಾರಗಳನ್ನು ಬಂದ್ ಮಾಡಿಸುತ್ತೇನೆ. ಇನ್ನು ಸರ್ಕಾರಕ್ಕೆ ನಷ್ಟವಾಗಿದೆ ಎನ್ನುವ ಮಾತನ್ನು ಮಾನ್ಯ ಸದಸ್ಯರು ಹೇಳಿದರು, ನಮ್ಮಲ್ಲಿರತಕ್ಕಂಥ ಸಿಬ್ಬಂದಿ ವರ್ಗ ಬಹಳ ಚಿಕ್ಕದಾಂ. ಆದ್ದರಿಂದ ಅಕ್ರಮವಾಗಿ ನಡೆಯುವ ಕ್ವಾರಿಯಿಂದಾಗಿ ಸರ್ಕಾರಕ್ಕೆ ನಷ್ಟವಾಗುತ್ತದೆ. ನಮ್ಮ ಇಲಾಖೆಯ ಅಧಿಕಾರಿ ವರ್ಗವನ್ನು ಹೆಚ್ಚು ಮಾಡಬೇಕೆಂದು ಗಣಿ ಮತ್ತು ಭೂ ವಿಜ್ಞಾನ ಇಲಾಖೆಯನ್ನು ಬಲಗೊಳಿಸಬೇಕೆನ್ನುವ ಪ್ರಪೋಜಲ್ ಒಂದು ಸರ್ಕಾರದ ಮುಂದೆ ಇದೆ, ಎಲ್ಲೆಲ್ಲಿ ಇಂತಹ ಅಕ್ರಮಕ್ವಾರಿ ನಡೆಯುತ್ತಿದೆ ಎನ್ನುವುದನ್ನು ಮಾನ್ಯ ಸದಸ್ಯರು ಪಟ್ಟಿ ಮಾಡಿ ಕೊಟ್ಟರೆ ತಕ್ಷಣ ನಮ್ಮ ಇಲಾಖಾಧಿಕಾರಿಗಳನ್ನು ಅಲ್ಲಿಗೆ ಕಳುಹಿಸಿ ಆಗುತ್ತಿರುವ ಅಕ್ರಮವನ್ನು ನಿಲ್ಲಿಸುತ್ತೇನೆ. ಮತ್ತು ಸರ್ಕಾರ ಖಂಡಿತವಾಗಿ ಈ ಬಗ್ಗೆ ಕ್ರಮ ತೆಗೆದುಕೊಳ್ಳುತ್ತದೆ ಎಂದು ತಿಳಿಸುತ್ತೇನೆ.

ಆನಿವಾಸಿ ಭಾರತೀಯರಿಗೆ ಕೈಗಾರಿಕಾ ಪ್ರದೇಶದ ಮಂಜೂರಾತಿ ಕುರಿತು

೧೪೨೦. ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ).–ಮಾನ್ಯ ಭಾರಿ, ಹಾಗೂ ಮಧ್ಯವಂ ಕೈಗಾರಿಕೆಗಳ ಹಾಗೂ ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ (ಕೆ.ಎ.ಐ.ಡಿ.ಬಿ.)ಯ ಪೀಣ್ಯ ಮತ್ತು ಬೊಮ್ಮಸಂದ್ರ ಕೈಗಾರಿಕಾ ಪ್ರದೇಶಗಳಲ್ಲಿ ಆ ನಿವಾಸಿ ಭಾರತೀಯರಿಗಾಗಿ (ಎನ್‌ಆರ್‌ಐ) ವಿಂಗಡಿಸಲಾಗಿರುವ ಕೈಗಾರಿಕಾ ಪ್ರದೇಶದ ಜಮೀನಿನ ವಿಸ್ತೀರ್ಣವೆಷ್ಟು ?

ಆ) ಈ ವಿಂಗಡಿಸಲು ಪ್ರದೇಶದಲ್ಲಿ ಎಷ್ಟು ಜನ ಆ ನಿವಾಸಿ ಭಾರತೀಯರಿಗೆ ಕೈಗಾರಿಕಾ ಪ್ರದೇಶಗಳನ್ನು ನೀಡಲಾಗಿದೆ (ಪ್ರತಿಯೊಬ್ಬರ ವಿವರಗಳನ್ನು ನೀಡುವುದಂ) ?

ಇ) ಈ ವಿಂಗಡಿಸಲು ಪ್ರದೇಶದಲ್ಲಿ ರಾಜ್ಯದ ಅಥವಾ ಹೊರ ರಾಜ್ಯದ ಕೈಗಾರಿಕೋದ್ಯಮಿಗಳಿಗೆ ಕೈಗಾರಿಕಾ ಪ್ರದೇಶ ನೀಡಿರುವ ವಿವರಗಳು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಜೆ. ಹೆಚ್. ಪಟೇಲ್ (ಕೈಗಾರಿಕಾ ವಂತು ವಿದ್ಯುಚ್ಛಕ್ತಿ ಸಚಿವರು).—

ಅ) ವಿಂಗಡಿಸಲಾಗಿಲ್ಲ

ಆ) ಉದ್ಭವಿಸುವುದಿಲ್ಲ

ಇ) ಉದ್ಭವಿಸವುದಿಲ್ಲ

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ.—ಮಾನ್ಯ ಅಧ್ಯಕ್ಷರೇ, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಲಿಯು ಪೀಣ್ಯ ಮತ್ತು ಬೊಮ್ಮಸಂದ್ರ ಕೈಗಾರಿಕಾ ಪ್ರದೇಶಗಳಲ್ಲಿ ಎನ್‌ಆರ್‌ಐಗೆ ವಿೂಸಲಾಗಿಟ್ಟ ಕೈಗಾರಿಕಾ ಪ್ರದೇಶದ ಜಮೀನಿನ ವಿಸ್ತೀರ್ಣ ಎಷ್ಟು ಎಂದು ಪ್ರಶ್ನೆ ಕೇಳಿದರೆ ವಿೂಸಲಾಗಿಟ್ಟಿಲ್ಲ ಎಂದು ಹೇಳಿದ್ದಾರೆ ಏತಕ್ಕೆ ?

ಶ್ರೀ ಜೆ. ಹೆಚ್. ಪಟೇಲ್.—ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯಿಂದ ಪೀಣ್ಯ ಮಂತಹ ಬೊಮ್ಮಸಂದ್ರ ಇಂಥ ಏರಿಯಾಗಳು ಏನು ಇವೆ, ಅಲ್ಲಿ ಎನ್.ಆರ್.ಐ.ನವರಿಗೆ ರಿಸರ್ವೇಶನ್ ಇಟ್ಟಿಲ್ಲ. ಈ ಜಾಗದಲ್ಲಿ ಇಂಡಸ್ಟ್ರೀ ಮಾಡುತ್ತೇವೆಂದು ಮುಂದೆ ಬಂದಾಗ ಎನ್.ಆರ್.ಐ. ನವರಿಗೆ ಪ್ರಿಫರೆನ್ಸ್ ಕೊಟ್ಟು ಜಾಗವನ್ನು ಕೊಟ್ಟಿರುವುದು ಉಂಟು.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ.— ಮ್ಮ ಕರ್ನಾಟಕ ರಾಜ್ಯದ ಕೈಗಾರಿಕೋದ್ಯಮಿಗೆ ಹಾಗೂ ಹೊರ ರಾಜ್ಯದ ಕೈಗಾರಿಕೋದ್ಯಮಿಗಳಿಗೆ ಕೈಗಾರಿಕಾ ಪ್ರದೇಶ ನೀಡಿರುವ ವಿವರಗಳನ್ನು ಕೊಡಿ ಎಂದರೆ ಅದಕ್ಕೆ ತಾವೆ ಉದ್ಭವಿಸುವುದಿಲ್ಲವೆಂದು ಹೇಳಿದ್ದೀರಿ.

ಶ್ರೀ ಜೆ. ಹೆಚ್. ಪಟೇಲ್.—ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಸದಸ್ಯರು ತಮ್ಮ ಪೊದಲನೇ ಪ್ರಶ್ನೆಯಲ್ಲಿ ಅನಿವಾಸಿ ಭಾರತೀಯರಿಗೆ ಇಂಡಸ್ಟ್ರೀಗಳನ್ನು ಮಾಡುವುದಕ್ಕೆ ಯಾವುದಾದರು ಪ್ರದೇಶವನ್ನು ವಿೂಸಲಾಗಿಟ್ಟಿದ್ದೀರಾ ಎಂದು ಕೇಳಿದ್ದಾರೆ. ಯಾವ ಪ್ರದೇಶವನ್ನೂ ವಿೂಸಲಾಗಿಟ್ಟಿಲ್ಲ, ಎರಡನೆಯ ಪ್ರಶ್ನೆಯಲ್ಲಿ ಎಷ್ಟು ಜನ ಅನಿವಾಸಿ ಭಾರತೀಯರಿಗೆ ಇಂಡಸ್ಟ್ರೀ ಪ್ರದೇಶಗಳನ್ನು ಕೊಟ್ಟಿದ್ದೀರಿ ಎಂದು ಕೇಳಿದ್ದಾರೆ. ಆದ್ದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲವೆಂದು ಹೇಳಿದ್ದೇನೆ ಎನ್.ಆರ್.ಐ.ನಲ್ಲಿ ಗುಜರಾತ್‌ನವರು ಇರುತ್ತಾರೆ. ಬೇರೆ ರಾಜ್ಯದವರೂ ಸೇರಿರುತ್ತಾರೆ ಕರ್ನಾಟಕದವರೂ ಸೇರಿರುತ್ತಾರೆ. ಮೂರನೇ ಪ್ರಶ್ನೆಯಲ್ಲಿ ವಿೂಸಲು ಪ್ರದೇಶದಲ್ಲಿ ರಾಜ್ಯದ ಆಥವಾ ಹೊರ ರಾಜ್ಯದ ಕೈಗಾರಿಕೋದ್ಯಮಿಗಳಿಗೆ ಕೈಗಾರಿಕಾ ಪ್ರದೇಶ ನೀಡಿರುವ ವಿವರಗಳನ್ನು ಕೇಳಿದ್ದಾರೆ. ಕೈಗಾರಿಕಾ ಪ್ರದೇಶ ಎಂದರೆ, ಬೇಕಾದಷ್ಟು ಕಡೆ ಇವೆ, ಇವರು ಯಾವ ಜಾಗದಲ್ಲಿ ಕೇಳುತ್ತಿದ್ದಾರೆ ? ಬೆಂಗಳೂರು ಹಶ್ತಿರ ಕೊಟ್ಟಿರುವುದೋ ಆಥವಾ ಇಡೀ ರಾಜ್ಯದಲ್ಲಿ ಕೊಟ್ಟಿರುವುದೋ? There are hundreds and thousands of industrial estates in the State. ತಾಲ್ಲೂಕು ಲೆವೆಲ್‌ನಲ್ಲೂ ಇಂಡಸ್ಟ್ರಿಯಲ್ ಏರಿಯಾಗಳು ಇವೆ. ಯಾವುದಾದರು ಒಂದು ಪ್ರದೇಶಕ್ಕೆ ನಿಗಧಿತವಾಗಿ ಕೇಳಿದರೆ ವಿವರಗಳನ್ನು ತರಿಸಿಕೊಡುತ್ತೇನೆ, ಇಡೀ ರಾಜ್ಯದ ವಿವರಗಳನ್ನು ಕೇಳಿದರೆ ವಿವರಗಳನ್ನು ಕೊಡುವುದಕ್ಕೆ ಸಮಯ ಬೇಕಾಗುತ್ತದೆ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ.—ಮಾನ್ಯ ಅಧ್ಯಕ್ಷರೇ, ಸ್ಥಳೀಯ ನಿರುದ್ಯೋಗಿಗಳು ಇಂಡಸ್ಟ್ರಿಯಲ್ ಸೈಟುಗಳಿಗೆ ಅರ್ಜಿಗಳನ್ನು ಸಲ್ಲಿಸಿದರೆ, ದೊಡ್ಡಬಳ್ಳಾಪುರ, ಹಿರೇಹಳ್ಳಿಗಳ ಕಡೆ ಜಾಗ ಕೊಡುತ್ತೀರಿ. ಪೀಣ್ಯದಲ್ಲಿ ಜಾಗ ಇದ್ದರೂ ಏಕೆ ಕೊಡುವುದಿಲ್ಲ ?

ಉಪಾಧ್ಯಕ್ಷರು.—ಈ ಪ್ರಶ್ನೆ ಇದಕ್ಕೆ ಸಂಬಂಧಪಡುವುದಿಲ್ಲ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ.—ಅಧ್ಯಕ್ಷರೆ, ಇದಕ್ಕೆ ಸಂಬಂಧಪಟ್ಟದ್ದೇ ಆಗಿದೆ.

ಶ್ರೀ ಜೆ. ಹೆಚ್. ಪಟೇಲ್ —ಎಲ್ಲಿ ಇಂಡಸ್ಟ್ರೀ ಪ್ರದೇಶಗಳು ಖಾಲಿ ಇರುತ್ತವೆಯೋ ಅಲ್ಲಿ ಕೊಡಲಾಗುತ್ತದೆ. ಪೀಣ್ಯದಲ್ಲಿ ಈಗಾಗಲೇ ತುಂಬಾ ಉದ್ದಿಮೆಗಳು ಬಂದಿವೆ. ಅಲ್ಲಿ ನಿವೇಶನಗಳು ಇಲ್ಲ. ಅದಕ್ಕೋಸ್ಕರ ದೊಡ್ಡಬಳ್ಳಾಪುರ ಹಾಗೂ ಬೇರೆ ಜಾಗದಲ್ಲಿ ಕೊಡಲಾಗುತ್ತದೆ. ಅಲ್ಲಿ ಏನೂ ಕಟ್ಟಡಾಗಿಲ್ಲ. ಬೇರೆ ಸ್ವಲ್ಪ ತೊಂದರೆ ಇರಬಹುದು ಅಷ್ಟೇ. ಮಾನ್ಯ ಉಪಾಧ್ಯಕ್ಷರೇ ಕೈಗಾರಿಕಾಭಿವೃದ್ಧಿಗೆ ನಾವು ಎಲ್ಲಾ ರೀತಿಯ ಸಹಾಯವನ್ನು ಮಾಡುತ್ತಿದ್ದೇವೆ. ಕೆಲವರುಗಳಿಗೆ ಇಂಥ ಏರಿಯಾಗಳಲ್ಲೇ ಬೇಕು ಎಂದು ಅನಿಸುತ್ತದೆ. ಎಲ್ಲಿ ಜಾಗ ಖಾಲಿ ಇರುತ್ತದೋ ಅಲ್ಲಿ ನಾವು ಕೊಡುತ್ತೇವೆ, ತಮಿಳುನಾಡಿನವರು ಹೊಸೂರು ಜಾಗದಲ್ಲಿ ಬಂದು ಇಂಡಸ್ಟ್ರೀಗಳನ್ನು ಮಾಡುತ್ತಿದ್ದಾರೆ. ನಾವು ಸ್ವಲ್ಪ ದೂರ ಹೋಗಿ ಇಂಡಸ್ಟ್ರೀಗಳನ್ನು ಮಾಡಿದರೆ ತಪ್ಪೇನು ಆಗುವುದಿಲ್ಲ. ಕರ್ನಾಟಕದವರಿಗೆ ನಾವು ಎಲ್ಲಾ ರೀತಿಯ ಪ್ರಾಶಸ್ತ್ಯವನ್ನು ಕೊಟ್ಟಿದ್ದೇವೆ.

ಶ್ರೀ ಬಿ. ಎನ್. ಬಚ್ಚೇಗೌಡ.—ಕೈಗಾರಿಕಾ ಪ್ರದೇಶಗಳನ್ನು ಬೆಂಗಳೂರಿನಿಂದ ಎಷ್ಟು ಕಿಲೋ ವಿೂಟರ್ ದೂರದಲ್ಲಿ ಮಾಡಬೇಕೆಂದು ನಿಯಮಾವಳಿಯನ್ನು ಮಾಡಲಾಗಿದೆ ಎಂಬುದನ್ನು ತಿಳಿಸಬೇಕು.

ಶ್ರೀ ಜೆ. ಹೆಚ್. ಪಟೇಲ್.—ಬೆಂಗಳೂರಿನಲ್ಲಿ ಭಾರಿ ಕೈಗಾರಿಕೆಗಳನ್ನು ಮಾಡುವುದಕ್ಕೆ ಮತ್ತು ವಿದ್ಯುಚ್ಛಕ್ತಿಯನ್ನು ಹೆಚ್ಚು ಬೇಡತಕ್ಕ ಕೈಗಾರಿಕೆಗಳಿಗೆ ಅವಕಾಶ ಕೊಡುವುದಿಲ್ಲ. ಎಲೆಕ್ಟ್ರಾನಿಕ್ ಉಪಕರಣಗಳನ್ನು ತಯಾರು ಮಾಡುವ ಕೈಗಾರಿಕೆಗಳಿಗೆ ಮಾತ್ರ ಇಲ್ಲಿ ಅವಕಾಶ ಕೊಡುತ್ತೇವೆ. ಬೆಂಗಳೂರಿನಲ್ಲಿ ಕೈಗಾರಿಕೆಗಳ ಸಮಸ್ಯೆ ಒಂದೇ ಇಲ್ಲ. ದಿನನಿತ್ಯ ಲಾ ಅಂಡ್ ಆರ್ಡರ್‌ದು ಸಮಸ್ಯೆ ಆಗಿದೆ, ನೀರಿನ ಸರಬರಾಜು ಮಾಡುವುದು ಕಷ್ಟವಾಗಿದೆ. ಆದ್ದರಿಂದ ಬೆಂಗಳೂರಿನಲ್ಲಿ ಕೈಗಾರಿಕೆಗಳಿಗೆ ಅವಕಾಶ ಕೊಡುವುದಿಲ್ಲ. ಬೆಂಗಳೂರಿನಿಂದ ಇಷ್ಟೇ ಕಿಲೋಮೀಟರ್ ದೂರದಲ್ಲಿ ಕೈಗಾರಿಕೆ ಸ್ಥಾಪನೆ ಮಾಡಬೇಕೆಂದು ನಿಯಮವೇನು ಮಾಡಿಲ್ಲ. ಗ್ರೀನ್‌ಬೆಲ್ಟ್ ಏರಿಯಾದಿಂದ ಹೊರಗೆ ಕೈಗಾರಿಕೆಗಳನ್ನು ಮಾಡಬಹುದು. ಪಪರ್ ಓರಿಯೆಂಟೆಡ್ ಆಥವಾ ಪಲ್ಯೂಷನ್ ಪ್ರಾಬ್ಲಮ್ ಬರುವ ಹಾಗಿದ್ದರೆ ಸ್ವಲ್ಪ ದೂರದಲ್ಲಿ ಮಾಡಬೇಕಾಗಿರುತ್ತದೆ.

ಗ್ರಾಮೀಣ ಎಣ್ಣೆ ಉದ್ದಿಮೆ

೧೫೦೪. ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಮಾನ್ಯ ಬಂದರು, ವಿಮಾನಗಾರಿಕೆ ಮತ್ತು ಸಣ್ಣ ಪ್ರಮಾಣದ ಕೈಗಾರಿಕಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕೋಲಾರ ಜಿಲ್ಲೆಯಲ್ಲಿರುವ ಗ್ರಾಮೀಣ ಉದ್ದಿಮೆಗಳಲ್ಲಿ ಎಣ್ಣೆ ಉತ್ಪಾದನೆಗಾಗಿ ರಾಜ್ಯ ಖಾದಿ ಗ್ರಾಮೋದ್ಯೋಗದಿಂದ ಆರ್ಥಿಕ ಸೌಲಭ್ಯ ಒದಗಿಸಲಾದ ಘಟಕಗಳ ಸಂಖ್ಯೆ ಎಷ್ಟು ?

ಆ) ಮುಳಬಾಗಿಲು ತಾಲ್ಲೂಕಿನಲ್ಲಿರುವ ಸದರಿ ಘಟಕಗಳ ಪೈಕಿ ಎಷ್ಟು ಘಟಕಗಳು (ಪ್ರಗತಿಯಾಹಾದಿಯಲ್ಲಿದೆ) ಉತ್ಪಾದನೆಯಲ್ಲಿವೆ ?

ಇ) ಸದರಿ ತಾಲ್ಲೂಕ್‌ನಲ್ಲಿರುವ ಘಟಕಗಳಿಗೆ ವಿಶೇಷ ಘಟಕ ಯೋಜನೆಯಲ್ಲಿ ಮಂಜೂರು ಮಾಡಲಾದ ಮೊತ್ತವೆಷ್ಟು ?

ಈ) ಸದರಿ ಹಣ ಮಂಜೂರು ಮಾಡುವಲ್ಲಿ ಹಣದ ಅವ್ಯವಹಾರ ನಡೆದಿರುವುದು ನಿಜವಲ್ಲವೆ ?

ಉ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ ಎಂ. ರಘುಪತಿ (ಬಂದರು, ವಿಮಾನಗಾರಿಕೆ ಮತ್ತು ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು).—

ಅ) ಹೌದು

ಬಿ) ೫೪ ಘಟಕಗಳಿಗೆ ಆರ್ಥಿಕ ಸೌಲಭ್ಯಗಳನ್ನು ಒದಗಿಸಲಾಗಿದೆ.

೧. ಸಹಕಾರ ಸಂಘಗಳಂ

೮ ನೋಂದಾಯಿತ ಸಂಸ್ಥೆಗಳು

೩. ವೈಯುಕ್ತಿಕ ವ್ಯಕ್ತಿಗಳಂ

ಸಿ) ಎರಡು ಘಟಕಗಳು ಉತ್ಪಾದನೆಯಲ್ಲಿವೆ.